| Publication: Ajeya | Pg No: 3 |
| --- | --- |
| Edition – Print | Date – 14.10.21 |

Summary: **Pranshu Singhal of KARO SAMBHAV** with the prestigious Social Entrepreneur of the Year Award - India 2021. The award was presented by **Prof. K. VijayRaghavan, Principal Scientific Adviser to the Government of India** at a virtual ceremony in presence of eminent personalities from different fields from across the world. Felicitating the winner and congratulating the finalists of this year's SEOY Award India 2021, **Prof. K. VijayRaghavan, Principal Scientific Adviser to the Government of India.**

# ಪ್ರಾಂಶು ಸಿಂಘಲ್‌ಗೆ ಸಾಮಾಜಿಕ ಉದ್ಯಮಿ ಪ್ರಶಸ್ತಿ

**ಬೆಂಗಳೂರು,ಅ.13:** ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ. ಕೆ.ವಿಜಯ ರಾಘವನ್ ಅವರಿಂದ 12ನೆಯ ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿ-ಭಾರತ 2021 (SEoY) ಪ್ರಶಸ್ತಿ ಸ್ವೀಕರಿಸಿದ ಕರೋ ಸಂಭವ್‌ನ ಪ್ರಾಂಶು ಸಿಂಘಲ್ ಜುಬಿಲಾಂಟ್ ಭಾರ್ತಿಯ ಗ್ರೂಪ್ ಲಾಭಕ್ಕಾಗಿಯಲ್ಲದ ಸಂಸ್ಥೆಯಾದ ವರ್ಲ್ಡ್ ಎಕನಾಮಿಕ್ ಫೋರಮ್ ಅಂಡ್ ಜುಬಿಲಾಂಟ್ ಭಾರ್ತಿಯ ಫೌಂಡೇಶನ್ನ ಸಹೋದರ ಸಂಸ್ಥೆಯಾದ ಶ್ವಾಬ್ ಫೌಂಡೇಶನ್ ಫಾರ್ ಸೋಶಿಯಲ್ ಆಂತ್ರೆಪ್ರೆನ್ಯೂರ್‌ಶಿಪ್ ಕರೋ ಸಂಭವ್‌ನ ಪ್ರಾಂಶು ಸಿಂಘಲ್ ಅವರಿಗೆ ಪ್ರತಿಷ್ಠಿತ 12ನೆ ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿ-ಭಾರತ 2021 (SEoY)ಪ್ರಶಸ್ತಿಯನ್ನು ಇಂದು ಪ್ರದಾನ ಮಾಡಿತು. ವಿಶ್ವಾದ್ಯಂತ ವಿವಿಧ ಕ್ಷೇತ್ರಗಳಿಂದ ಬಂದಿದ್ದ ಸುಪ್ರಸಿದ್ಧ ವ್ಯಕ್ತಿಗಳ ಸಮ್ಮುಖದಲ್ಲಿ, ವರ್ಚುವಲ್ ರೂಪದಲ್ಲಿ ನಡೆದ ಸಮಾರಂಭದಲ್ಲಿ ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹಾಗಾರ ಪ್ರೊ.ಆರ್. ಕೆ. ವಿಜಯರಾಘವನ್ ಅವರು ಪ್ರಶಸ್ತಿಯನ್ನು ನೀಡಿದರು.

ವಿಜೇತರನ್ನು ಗೌರವಿಸುತ್ತಾ ಹಾಗೂ ಈ ವರ್ಷದ SEoY ಅವಾರ್ಡ್ ಇಂಡಿಯಾ 2021ದ ಅಂತಿಮ ಸ್ಪರ್ಧಿಗಳನ್ನು ಅಭಿನಂದಿಸುತ್ತಾ ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹಾಗಾರ ಪ್ರೊ. ಕೆ. ವಿಜಯ ರಾಘವನ್ ಅವರು, "ಈ ಜಾಗತಿಕ ಸಾಂಕ್ರಾಮಿಕವು ಒಂದು ದೊಡ್ಡ ಬಿಕ್ಕಟ್ಟಾಗಿದ್ದು ಸಮಾಜದ ಪ್ರತಿಯೊಂದು ಕ್ಷೇತ್ರದ ಸಾಮಾಜಿಕ ಉದ್ಯಮಿಗಳು, ಅತ್ಯಂತ ಅಸಹಾಯ ಜನರ ಕನಿಷ್ಠ ಅಗತ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪೂರೈಸುವ ಮೂಲಕ ತುರ್ತುಸ್ಥಿತಿ ಸಹಾಯಕರಾಗಿ ಹೊರಹೊಮ್ಮಿದ್ದಾರೆ. ಸಂಭಾವ್ಯವಾಗಿ ಅಸಾಧ್ಯವೆನಿಸುವ ಸವಾಲುಗಳಿಗೆ ವಿಶಿಷ್ಟ ಪರಿಹಾರಗಳನ್ನು ಮೂಲದಲ್ಲಿ ಒದಗಿಸಲು ಕಾರ್ಯನಿರ್ವಹಿಸುತ್ತಿರುವ ಈ ಪರಿವರ್ತಕರಿಂದ ನಾವು ಕೆಲವು ಮುಖ್ಯ ಪಾಠಗಳನ್ನು ಕಲಿಯಬೇಕಾಗುತ್ತದೆ. ಸವಾಲುಗಳನ್ನು ಪರಿಹರಿಸುವಲ್ಲಿ ಅವರ ಪರಿಕಲ್ಪನೆಗಳು, ಕೆಲಸ ಹಾಗೂ ಕೊಡುಗೆಗಳನ್ನು ಗುರುತಿಸುವ ಮೂಲಕ ಅವರ ಕೆಲಸವನ್ನು ತ್ವರೆಗೊಳಿಸಲು ಮತ್ತು ಅವರ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗಬಹುದು. ಈಗ್ಗೆ ಒಂದು ದಶಕದಿಂದ ಈ ಸಾಮಾಜಿಕ ಉದ್ಯಮಿಗಳನ್ನು ಗುರುತಿಸುವ ಈ ವಿಶಿಷ್ಟ ಉಪಕ್ರಮಕ್ಕಾಗಿ ನಾನು ಶ್ವಾಬ್ ಫೌಂಡೇಶನ್ ಮತ್ತು ಜುಬಿಲಾಂಟ್ ಭಾರ್ತಿಯ ಫೌಂಡೇಶನ್ ಅನ್ನು ಶ್ಲಾಘಿಸುತ್ತೇನೆ." ಎಂದರು.